**O. S. No: 217/2024**
**PW:1**

(ಇಂದು ದಿನಾಂಕಃ **17-06-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ 2 ನೇ ಪ್ರತಿವಾದಿಯ ಪರವಾಗಿ ಶ್ರೀ ಕೆ ಎನ್ ಕೆ ವಕೀಲರಿಂದಃ**

ನಾನು ಈಗ ಅಣ್ಣಿಗೇರಿಯಲ್ಲಿ ವಾಸವಿದ್ದೇನೆ. ಮದುವೆಯಾದ ನಂತರ 1 ವರ್ಷದ ವರೆಗೆ ಗಂಡನ ಮನೆಯಲ್ಲಿ ವಾಸವಿದ್ದು, ಅವನು ಸರಿಯಾಗಿ ನೋಡಿಕೊಳ್ಳದ ಕಾರಣ ನಾನು ಮಕ್ಕಳನ್ನು ಕರೆದುಕೊಂಡು ಅಣ್ಣಿಗೇರಿಯಲ್ಲಿ ವಾಸವಿದ್ದೇನೆ. ನಾನು ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಜಮೀನುಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿದ್ದು, ಮನೆಗಳು 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿವೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಮದುವೆಯಾದ ನಂತರ 1 ವರ್ಷದ ವರೆಗೆ ನಾನು 1 ನೇ ಪ್ರತಿವಾದಿಯೊಂದಿಗೆ ವೈವಾಹಿಕ ಜೀವನ ನಡೆಸಿರುತ್ತೇನೆ. 2 ಮತ್ತು 3 ನೇ ವಾದಿಯರು ನನ್ನ ಮಕ್ಕಳು ಎಂದರೆ ಸರಿ. ನಾನು ಈಗಲೂ ಸಹ ಉಳಿದ ವಾದಿಯರೊಂದಿಗೆ 1 ನೇ ಪ್ರತಿವಾದಿಯ ಮನೆಯಲ್ಲಿ ವಾಸವಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿಯೂ ಸಹ ಕೊಂಗವಾಡದಲ್ಲಿದ್ದೇನೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ವಿ ಪಿ ಸಿ ಆಸ್ತಿ ಸಂಃ 394, 76, 78 ಗಳನ್ನು ಉದ್ದೇಶಪೂರ್ವಕವಾಗಿ ದಾವೆಯಲ್ಲಿ ಸೇರಿಸದೇ 2 ನೇ ಪ್ರತಿವಾದಿಗೆ ತೊಂದರೆಕೊಡುವ ಉದ್ದೇಶದಿಂದ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

2. ನನ್ನ ಮದುವೆ 2009 ರಲ್ಲಿ ಆಗಿರುತ್ತದೆ. 2 ನೇ ವಾದಿ 2011 ರಲ್ಲಿ ಜನಿಸಿರುತ್ತಾರೆ. 3 ನೇ ವಾದಿ 2012 ರಲ್ಲಿ ಜನಿಸಿರುತ್ತಾರೆ. ನಾನು ಕಳೆದ 5-6 ವರ್ಷಗಳಿಂದ ಕೊಂಗವಾಡ ಬಿಟ್ಟು ಅಣ್ಣಿಗೇರಿಯಲ್ಲಿ ವಾಸವಿದ್ದೇನೆ. ನಾನು ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಂಗವಾಡದಲ್ಲಿದ್ದಾಗ ನನ್ನ ಹಾಗೂ ಉಳಿದ ವಾದಿಯರ ಉಪಜೀವನವನ್ನು 1 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಎಲ್ಲಿಯೂ ಸಹ ಸಾಲ ಮಾಡಿರಲಿಲ್ಲ. ಸದರಿಯವನು ಬ್ಯಾಂಕ್ ನಲ್ಲಿ ಸಾಲ ಮಾಡಿದ್ದಾನೆಂದರೆ ನನಗೆ ಗೊತ್ತಿಲ್ಲ. ಸದರಿಯವನು ಬೇರೆ ಕಡೆಗೆ ಸಾಲ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿಯವನು ಮನೆತನದ ಅಡಚಣೆಗಾಗಿ ಕೃಷಿ ಸಾಲ, ಕೈಗಡ ಸಾಲ ಹಾಗೂ ಬೆಳೆ ಸಾಲವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆತನದ ಅಡಚಣೆಗಾಗಿ 1 ನೇ ಪ್ರತಿವಾದಿ ದಾವಾ ಜಮೀನು ಸರ್ವೇ ನಂಃ 258/1 ಕ್ಷೇತ್ರ 5 ಎಕರೆ 1 ಗುಂಟೆ ಜಮೀನನ್ನು ದಿನಾಂಕಃ20-01-2022 ರಂದು ಮಾರುಕಟ್ಟೆಯ ಬೆಲೆಗೆ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಪಾವತಿ ಮಾಡಿದ ಹಣವನ್ನು ನಮ್ಮ ಮನೆತನದ ಅಡಚಣೆಗಾಗಿ, 2 ಮತ್ತು 3 ನೇ

ವಾದಿಯರ ವಿದ್ಯಾಭ್ಯಾಸಕ್ಕಾಗಿ ಹಾಗೂ ವೈದ್ಯಕೀಯ ವೆಚ್ಚಕ್ಕಾಗಿ ಉಪಯೋಗಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-7 ರಲ್ಲಿರುವ ಸಹಿಗಳನ್ನು ನೋಡಿ ಗುರುತಿಸಲಾಗುವುದಿಲ್ಲ. ಸಾಕ್ಷಿಯು ಮುಂದುವರೆದು ಓಣಿಯಲ್ಲಿರುವ 4 ಜನರನ್ನು ಕರೆದುಕೊಂಡು 2 ನೇ ಪ್ರತಿವಾದಿ ನನ್ನ ಗಂಡನಿಗೆ ಮದ್ಯಪಾನ ಮಾಡಿಸಿ ಖರೀದಿ ಪತ್ರ ಬರೆಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿಗೆ ನಷ್ಟ ಉಂಟುಮಾಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀಮತಿ ಎ ಎಸ್ ಜೆ ವಕೀಲರಿಂದಃ**

1 ನೇ ಪ್ರತಿವಾದಿ ಮನೆತನದ ಅಡಚಣೆಗಾಗಿ ದಾವಾ ಆಸ್ತಿ ಕ್ರಮ ಸಂಃ 1 ನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**